ಶ್ರೀ ಕೆ.ಎಚ್. ಪಾಟೀಲ್ : ಧಾರವಾಡ ಜಿಲ್ಲೆಯಲ್ಲಿ ಸೈಟ್ ಸೆಲೆಕ್ಷನ್ ಪ್ರಯತ್ನ ಮಾಡಲಿಕ್ಕೆ ಶುರು ಮಾಡಿದ್ದಾರೆ. ಈಗ ಕೆಲವು ಸಿಕ್ಕಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮದು ಪ್ರತ್ಯಕ್ಷ ಅನುಭವವೇನೆಂದರೆ, ಸೈಟ್ ಫಾರ್ಮೇಶನ್ ಮಾಡುವುದಕ್ಕೆ ಬಿಡಿಒ ಹತ್ತಿರ ದುಡ್ಡಿಲ್ಲ, ಮಂಡಲ ಪಂಚಾಯಿತಿಯವರಿಗೆ ಮಾಡುವುದಕ್ಕೆ ಬರುವುದಿಲ್ಲ, ಈಗಲಾದರೂ ಸೈಟ್ ಫಾರ್ಮೇಶನ್‌ಗಾಗಿ ಇಂತಿಷ್ಟು ದುಡ್ಡೆಂದು ಬಿಡುಗಡೆ ಮಾಡುತ್ತೀರಾ?

ಶ್ರೀ ಕೆ.ಎಚ್.ಪಾಟೀಲ್ : ನಾವು ಬಿಡಿಒನವರಿಗೆ ಸೈಟ್ ಸೆಲೆಕ್ಷನ್ ಮಾಡಿ, ಖರೀದಿ ಮಾಡಬೇಕೆಂದು ಅಧಿಕಾರ ಕೊಟ್ಟಿಲ್ಲ, ಅವರು ಐಡೆಂಟಿಫೈ ಮಾಡುತ್ತಾರೆ. ನಂತರ D.C. will acquire the land or purchase the land. It is not given to any other person. The DC is empowered and he will identify it in his own way.

ಶ್ರೀ ಜೆ.ಸಿ. ಮಾಧುಸ್ವಾಮಿ :ಸೈಟ್ ಅಕ್ವೈರ್ ಮಾಡಿದ ನಂತರ ಫಾರ್ಮೇಶನ್‌ಗಾಗಿ ಹಣ ಕೊಡಲಿಲ್ಲವೆಂದು ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರಗಳು ಮುಗಿಯಿತು. ಈಗ.....

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ನನ್ನ ಪ್ರಶ್ನೆಗೆ ಉತ್ತರ ಇದುವರೆವಿಗೂ ಬಂದಿಲ್ಲ, ತಾವು ಆಶ್ವಾಸನೆ ಕೊಟ್ಟಿದ್ದೀರಿ. ಬೆಳಗಾವಿ ಕೃಷಿ ಭವನದ ಕೋಟಾ ವ್ಯವಹಾರದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಒಂದು ವಾರದೊಳಗಾಗಿ ಉತ್ತರ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಇಲ್ಲಿಯತನಕ ಏನೋ ಒಳ ವ್ಯವಹಾರ ನಡೆಯುತ್ತಿದೆಯೋ ಏನೋ ನನಗೆ ಗೊತ್ತಿಲ್ಲ, ಆ ಕಾರಣ, ಮಾನ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ರೇಷ್ಮೆ ಹುಳು ಗಂಟುರೋಗದ ಬಗ್ಗೆ ಚರ್ಚೆಯಾಗಬೇಕೆಂದು ನಾವು ಪ್ರಾರಂಭದಿಂದಲೂ ಕೇಳುತ್ತಿದ್ದೇವೆ.

ಅಧ್ಯಕ್ಷರು : ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಬೆಂಗಳೂರು ಮೈಸೂರು ನಡುವೆ ವೇಗದ ಹೆದ್ದಾರಿ ಯೋಜನೆಯ ಮಂಜೂರಾತಿ

1819-ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು-ಮೈಸೂರು ಹೆದ್ದಾರಿ ನಡುವೆ ವೇಗದ ಹೆದ್ದಾರಿ ಯೋಜನೆ ಮಂಜೂರಾಗಿದೆಯೆ?*

ಆ) *ಮಂಜೂರಾಗಿದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು, ಹಾಗೂ ಅದಕ್ಕೆ ತಗಲುವ ವೆಚ್ಚ ಎಷ್ಟು?*

ಇ) *ಈ ಯೋಜನೆಯಿಂದ ಎಷ್ಟು ಕಿ.ಮೀ. ಉಳಿತಾಯವಾಗುವುದು?*

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಇಲ್ಲ.

ಅ) ಬೆಂಗಳೂರು ಮೈಸೂರು ಮಧ್ಯೆ ಪ್ರತ್ಯೇಕವಾದ ವೇಗದ ಹೆದ್ದಾರಿಯ ನಿರ್ಮಾಣದ ಯೋಜನೆಯು ಸರ್ಕಾರದ ಉನ್ನತಮಟ್ಟದ ಕಮಿಟಿಯ ಪರಿಶೀಲನೆಯಲ್ಲಿದೆ. ಯೋಜನೆಯು ಮಂಜೂರು ಆದ ನಂತರ ಪ್ರಾರಂಭಿಸಲಾಗುವುದು. ಇದಕ್ಕೆ ಸುಮಾರು 200 ಕೋಟಿ ರೂ.ಗಳ ಅಂದಾಜು ಆಗುತ್ತದೆ.

ಇ) ಸುಮಾರು 10 ಕಿ.ಮೀ. ನಷ್ಟು ದೂರ ಕಡಿಮೆ ಆಗುವುದೇ ಅಲ್ಲದೇ ವೇಳೆಯ ಉಳಿತಾಯವೂ ಅಪಘಾತ ರಹಿತವೂ ಆಗುತ್ತದೆ.

ಬೀದರ್ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ರಸ್ತೆಗಳನ್ನು ತೆಗೆದುಕೊಂಡಿರುವುದರ ಬಗ್ಗೆ.

1908-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91ಮತ್ತು 1991-92ನೆ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಎಷ್ಟು ಕಿ.ಮೀ.ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿರುತ್ತಾರೆ (ವಿವರಗಳನ್ನು ನೀಡುವುದು).*

ಆ) *ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕ್ರಮಗಳೇನು.*

ಇ) *ಮುಂಬರುವ ವರ್ಷದಲ್ಲಿ ಎಷ್ಟು ಕಿಲೋಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಯು ವಹಿಸಿಕೊಳ್ಳಲಿದೆ?*

ಶ್ರೀ ಜಿ.ಪೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) 1990-92 ಮತ್ತು 1991-92ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಯಾವುದೇ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸುಮಾರು ಒಟ್ಟು 6000 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಷಯವನ್ನು ಶೀಘ್ರದಲ್ಲಿ ತೀರ್ಮಾನಿಸಲಾಗುವುದು.

ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಕಲಘಟಗಿ ತಾಲ್ಲೂಕನ್ನು ಸೇರಿಸುವುದರ ಬಗ್ಗೆ.

1910-ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಕಲಘಟಗಿ ತಾಲ್ಲೂಕನ್ನು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸೇರಿಸಬೇಕೆಂದು ಧಾರವಾಡ ಜಿಲ್ಲಾ ಪರಿಷತ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರವು ಅದರ ಬಗ್ಗೆ ಕೈಗೊಂಡ ಕ್ರಮಗಳೇನು?*

ಇ) *ಈ ಪ್ರದೇಶವು ಮಲೆನಾಡು ಪ್ರದೇಶ ಹಾಗೂ ಹಿಂಮಳಿದ ಪ್ರದೇಶವಾಗಿರುವುದರಿಂದ ಹಾಗೂ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಕಲಘಟಗಿ ತಾಲ್ಲೂಕನ್ನು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸೇರಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?*